

# ಕಾಡಿಗೆ ಕರಗಿ ಕತ್ತಲಾದರೆ

ನಿಂಬೆಹಣ್ಣ ರಂಗು, ಬಾಳೆಹುವ್ವಿನಂಚು ಸೀರೆ
ತೊಗರಿ ಚಿಗುರ ರವಿಕೆ
ಶುಕ್ಲಪಕ್ಷ ನವಮಿಚಂದ್ರ ತಿಲದಲ್ಲಿ ನಕ್ಕ ಮುಖ

ಕೆನ್ನೆ ಬಳಿಯ ಕುರುಳ ಸುರುಳಿ ಸುತ್ತಿ
ಬಳೆಯ ಹಾಡು ನುಡಿದ
ಕೈಯ ಸೊಂಟಕಿರಿಸಿ ನಿಂತ ಕ್ಷಣದ ಭಂಗಿ

ಸಂಜೆ ಜಗುಲಿಯಲ್ಲಿ ಕೆನ್ನೆಗುಳಿಯ ಮಂಡಿಗೂರಿ
ಎವೆಯನಿಡದೆ ನೋಡುತಿ–
ರುವ ಕಣ್ಣು ಮುಡಿದ ಚಿತ್ರ ಯಾರದೆ?

ಕಿವಿಯ ಮೇಲೆ ಕುಳಿತ ದುಂಬಿರೆಕ್ಕೆ ಪಕ್ಕ ಸರಿಸಿ
ಜುಮುಕಿ ಅಲುಗು ಕೂಡ
ಅಡ್ಡಿಯೆಂದು ಕಳಚಿ ಯಾರ ದನಿಗೆ ಕಿವಿಯ ತೆರೆದೆ?

ಒಂದು ಕ್ಷಣ ರೆಪ್ಪೆ ಬಡಿದು ಕಣ್ಣುಮುಚ್ಚಿ ತೆರೆದು
ತುಟಿಗೆ ನಗೆಯ ಮುಡಿಸಿ
ಕೋ ಕೊಡುವೆ ನವಿಲುಗರಿಯ ಉಡುಗೊರೆ.

ಕಣ್ಣು ಮುಚ್ಚಿ ನವಿಲುಗರಿಯ ಒತ್ತಿಕೊಂಡ
ಕಣ್ಣಿನಲ್ಲಿ ಜಿನುಗುತಿರುವ
ನೀರ ಗರಿಗೆ ಕುಡಿಸು ಬೇಗ ಕಣ್ಣು ತೆರೆಯದೆ.

ಕಾಡಿಗೆ ಕರಗಿ ಕತ್ತಲಾಗಿ ಬರಲು ದಾರಿ
ಕಾಣದಾದ ತಬ್ಬಿಬ್ಬಿನಲ್ಲಿ
ಹಿಡಿದಾನು ಮರಳಿ ತನ್ನ ಊರದಾರಿ.

